O.S.241/2016
ಪಿ ಡಬ್ಲ್ಯೂ-1

**ಸಾಕ್ಷಿಯನ್ನು ದಿನಾಂಕ 18-03-2026 ರಂದು ಕರೆಸಿ ಸತ್ಯ ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ- ವಾದಿ ಪರ ಶ್ರೀ ಹೆಚ್ ಸಿ ವಿ ವಕೀಲರಿಂದಃ**

ನಾನು ಈ ದಿನ ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲಾತಿಗಳನ್ನು ನನ್ನ ಪರವಾಗಿ ನಿಶಾನೆಗೊಳಿಸಲು ಪ್ರಾರ್ಥನೆ. (ಸಾಕ್ಷಿಯು ಹಾಜರು ಮಾಡಿರುವ ಈ ಕೆಳಗಿನ ದಾಖಲೆಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈ ಕೆಳಗಿನಂತೆ ನಿಶಾನೆಗಳಾಗಿ ಗುರುತಿಸಲಾಗಿದೆ.)

ಸಾಕ್ಷಿಯು ದಿಃ 13.12.2005 ರ ನೊಂದಾಯಿತ ಅಲ್ಲದ ಒಪ್ಪಂದ ಕರಾರು ಪತ್ರವನ್ನು ನೋಡಿ ಗುರುತಿಸಿದ್ದು, ಪ್ರತಿವಾದಿ ಪರ ವಕೀಲರು ಸದರಿ ಪತ್ರವನ್ನು ಪ್ರತಿವಾದಿ ಬರೆದುಕೊಟ್ಟಿರುವುದಿಲ್ಲ ಹಾಗೂ ಸದರಿ ಪತ್ರದಲ್ಲಿರುವ ಹೆಬ್ಬೆಟ್ಟಿನ ಗುರುತುಗಳು ಹಾಗೂ ಸಹಿಗಳು ಪ್ರತಿವಾದಿಯದಲ್ಲದೇ ಇರುವ ಕಾರಣ ಸದರಿ ದಾಖಲೆಯನ್ನು ನಿಶಾನೆಯಾಗಿ ಗುರುತಿಸಲು ಬರುವುದಿಲ್ಲ ಎಂದು ಆಕ್ಷೇಪಣೆ ವ್ಯಕ್ತಪಡಿಸಿದ್ದು, ಆದರೆ ಸದರಿ ದಾಖಲೆಯನ್ನು ಪ್ರತಿವಾದಿ ಬರೆದುಕೊಟ್ಟಿರುತ್ತಾರೆ ಇಲ್ಲವೆ ಎಂಬುದರ ಬಗ್ಗೆ ಈ ಹಂತದಲ್ಲಿ ತೀರ್ಮಾನಿಸಲು ಆಗುವುದಿಲ್ಲ, ಆ ಬಗ್ಗೆ ದಾವೆಯ ಅಂತಿಮ ತೀರ್ಪಿನ ಸಮಯದಲ್ಲಿ ನಿರ್ಧರಿಸಬೇಕಾಗುತ್ತದೆ. ಆದ ಕಾರಣ ಪ್ರತಿವಾದಿ ಪರ ಆಕ್ಷೇಪಣೆಗೆ ಒಳಪಟ್ಟು ಒಪ್ಪಂದದ ಕರಾರು ಪತ್ರವನ್ನು ನಿಪಿ-7 ಎಂದು ಗುರುತಿಸಲಾಯಿತು.

ಸಾಕ್ಷಿಯು ನಿಪಿ-7 ರಲ್ಲಿರುವ ತನ್ನ ಸಹಿಗಳನ್ನು ಹಾಗೂ ಸಾಕ್ಷಿದಾರರಾದ ಎಂ ರಾಮಯ್ಯ, ಹುಲಿರಾಮಯ್ಯ ಮತ್ತು ಬಿಪಕ್ಷಂದಾರರಾದ ಬಿ ಹೆಚ್ ನಾಗೇಂದ್ರಪ್ಪರವರ ಸಹಿಗಳನ್ನು ನೋಡಿ ಗುರುತಿಸಿದ್ದು, ಸದರಿ ಸಹಿಗಳನ್ನು ನಿಪಿ-7(ಎ) ಯಿಂದ ನಿಪಿ7(ಎಫ್) ಎಂದು ಗುರುತಿಸಲಾಯಿತು.

ಸಾಕ್ಷಿಯು ನಿಪಿ-7 ರಲ್ಲಿ ಪ್ರತಿವಾದಿಯ ಸಹಿಗಳನ್ನು ನೋಡಿ ಗುರುತಿಸಿದ್ದು, ಸದರಿ ಸಹಿಗಳನ್ನು ನಿಪಿ-7(ಜಿ) ಯಿಂದ (ಐ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ ಪರ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೇಳಿದ್ದು, ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓದಿ ಹೇಳಿ ಕೇಳಿ ಸರಿ ಇರುತ್ತದೆ.**

**ಸಿ.ಜೆ. ಮತ್ತು ಪ್ರ.ದ.ನ್ಯಾದಂ.**
**ಕೊರಟಗೆರೆ**

O.S.241/2016
ಪಿ ಡಬ್ಲ್ಯೂ-1

O.S.241/2016
ಪಿ ಡಬ್ಲ್ಯೂ-1

Plaintiff present, filed his affidavit in lieu of chief examination and examined as PW-1 got marked Ex.P. 1 to 12.

Sri. DCS prays time.

Further chief of PW 1 by: 27.04.2026.

Civil Judge and JMFC.
*Koratagere.*